



ಹೋಯಿತು. ದಿನವಿಡೀ ಆ ಹುಡುಗನಿಗೆ ಇದೇ ಕೆಲಸವಾಯಿತು. ಕೊನೆಗೂ ಆತ ಸಂಬರಗಾಗಿಯನ್ನು ಬಲಕ್ಕೆ ಮಾಡಿಕೊಂಡು ಹೋದ. ಆದರೆ ಆತನ ಹಾದಿ ತಪ್ಪಿತ್ತು. ಸೂರ್ಯ ಮುಳುಗಿ ಕತ್ತಲಾಗಿತ್ತು. ದಣಿದು ಬಸವಳಿದ ಆತ ಒಂದು ಗಿಡದ ಕೆಳಗೆ ಮಲಗಿಕೊಂಡ. ಬೆಳಿಗ್ಗೆ ಎದ್ದಾಗ ಆತ ಕಾಡಿನಲ್ಲಿ ಇರಲಿಲ್ಲ. ಅರಮನೆಯ ಸುಪ್ಪತ್ತಿಗೆಯಲ್ಲಿ ಇದ್ದ. ಎಲ್ಲ ಕಷ್ಟಗಳನ್ನು ಸಹಿಸಿ ತಾಯಿಯ ಮಾತಿನಂತೆ ನಡೆದುಕೊಂಡ ಆ ಬಡ ಬಾಲಕನನ್ನು ಸಂಬರಗಾಗಿ ಮಹಾರಾಜನನ್ನಾಗಿ ಮಾಡಿತ್ತು.

—ಇದೊಂದು ಜಾನಪದ ಕಥೆ. ಸಂಬರಗಾಗಿಯ ಕುರಿತಾದ ಇಂಥ ನೂರಾರು ಕತೆಗಳು ಉತ್ತರ ಕರ್ನಾಟಕದ ಹಳ್ಳಿಹಳ್ಳಿಗಳಲ್ಲಿ ಕೇಳಲು ಈಗಲೂ ಸಿಗುತ್ತವೆ.

ಶಂಭರಗಾಗಿ, ಕೆಂಬೋತ, ಭಾರದ್ವಾಜ ಪಕ್ಷಿ, ರತ್ನ ಪಕ್ಷಿ ಎಂದೆಲ್ಲ ಕರೆಯಲ್ಪಡುವ ಈ ಸಂಬರಗಾಗಿ ಶುಭದ ಸಂಕೇತ. ಬೆಳಿಗ್ಗೆ ಈ ಪಕ್ಷಿಯನ್ನು ನೋಡಿದರೆ ದಿನವೆಲ್ಲ ಸಂತೋಷಕರವಾಗಿರುತ್ತದೆ, ಶುಭವಾಗುತ್ತದೆ ಎಂಬ ನಂಬಿಕೆ ಇದೆ. ಯುಗಾದಿ ಪ್ರತಿಪದೆಯಂದು ಹಾಗೂ ದೀಪಾವಳಿ ಪ್ರತಿಪದೆಯಂದು ರತ್ನ ಪಕ್ಷಿಯನ್ನು ಹುಡುಕಿಕೊಂಡು ಜನ ಅಲೆಯುತ್ತಾರೆ. ಅದಕ್ಕಾಗಿ ಇಡೀ ದಿನ ಕಳೆಯುತ್ತಾರೆ. ರತ್ನ ಪಕ್ಷಿಯ ದರ್ಶನವಾಗದಿದ್ದರೆ, ಅಯ್ಯೋ, ಮುಂದಿನ ವರ್ಷ ಅದೇನು ಕಾದಿದೆಯೋ.. ಎಂದು ಚಿಂತೆಗೆ ಬೀಳುತ್ತಾರೆ. ಹೊಸ ವರ್ಷದ ಮೊದಲ ದಿನ ಸಂಬರಗಾಗಿಯ ದರ್ಶನವಾದರೆ, ಇಡೀ ವರ್ಷ ಆನಂದದಾಯಕವಾಗಿರುತ್ತದೆ ಎಂಬ ನಂಬಿಕೆ ಅವರದು.

ಕಾಗೆ–– ಕೋಗಿಲೆಗಳ ಕುಲಕ್ಕೆ ಸೇರಿದ ಸಂಬರಗಾಗಿ ಆ ಕುಲದ ಎಲ್ಲ ಪಕ್ಷಿಗಳಿಗಿಂತ ಸುಂದರವಾದದ್ದು. ಕಪ್ಪು ಬಣ್ಣದ ಈ ಪಕ್ಷಿಯ ರೆಕ್ಕೆಗಳು ಕಂದು ಮಿಶ್ರಿತ ಕೆಂಪು ವರ್ಣದ್ದಾಗಿವೆ. ಇದರ ಕಣ್ಣು ಕಡು ಕೆಂಪು. ಉದ್ದವಾದ ಬಾಲದ ತುದಿ ಅರ್ಧ ಚಂದ್ರಾಕಾರದಲ್ಲಿರುತ್ತದೆ. ಇವು ಹಾರುವಾಗ, ಕುಪ್ಪಳಿಸುವಾಗ ತಮ್ಮ ಬಾಲವನ್ನು ನಿಮಿರಿಸುತ್ತವೆ. ತೀರ ನಾಚಿಕೆಯ ಸ್ವಭಾವದ ರತ್ನಪಕ್ಷಿ ಸುಲಭವಾಗಿ ಯಾರ ಕಣ್ಣಿಗೂ ಬೀಳುವುದಿಲ್ಲ. ಯಾರಾದರೂ ತನ್ನನ್ನು ನೋಡುತ್ತಾರೆ ಎಂದು ಅನ್ನಿಸಿದರೆ ಅದು ಗಿಡಗಳ ಟೊಂಗೆ ಮತ್ತು ಎಲೆಗಳ ಮಧ್ಯ ಮರೆಯಾಗಿಬಿಡುತ್ತದೆ.

ಸಾಮಾನ್ಯವಾಗಿ ಪಕ್ಷಿಗಳನ್ನು ನೆಲಪಕ್ಷಿ, ಜಲಪಕ್ಷಿ ಹಾಗು ಹಿಂಸ್ರಪಕ್ಷಿ ಎಂದು ಮೂರು ವಿಭಾಗಗಳಲ್ಲಿ ವಿಂಗಡಿಸುತ್ತಾರೆ. ರತ್ನಪಕ್ಷಿ ನೆಲಪಕ್ಷಿ ವಿಭಾಗಕ್ಕೆ ಸೇರುತ್ತದೆ. ಅದು ಬಹಳ ಎತ್ತರ ಹಾರುವುದಿಲ್ಲ. ಬಹಳ ದೂರವೂ ಹಾರುವುದಿಲ್ಲ. ನೆಲದ ಮೇಲೆ ನಡೆಯುತ್ತದೆ. ಗಿಡದ ಟೊಂಗೆಯಿಂದ ಟೊಂಗೆಗೆ ಜಿಗಿಯುತ್ತದೆ. ಅದು ತನ್ನ ರೆಕ್ಕೆಗಳಿಗಿಂತ ಕಾಲುಗಳನ್ನೇ ಹೆಚ್ಚು ಬಳಸುತ್ತದೆ.

ಸಾಮಾನ್ಯ ಕಾಗೆಗಿಂತ ರತ್ನಪಕ್ಷಿ ಗಾತ್ರದಲ್ಲಿ ಸ್ವಲ್ಪ ದೊಡ್ಡದು. 47 ರಿಂದ 53 ಸೆಂಟಿಮೀಟರಿನಷ್ಟು ಉದ್ದವಾಗಿರುತ್ತದೆ. ಅದರ ತೂಕ 236 ರಿಂದ 268 ಗ್ರಾಮ್‌ಗಳಷ್ಟು. ಇದನ್ನು ಆಂಗ್ಲ ಭಾಷೆಯಲ್ಲಿ **greater coucal** ಹಾಗೂ **crow pheasant** ಎಂದು ಕರೆಯುತ್ತಾರೆ. ಇದಕ್ಕೂ ಸಣ್ಣ ಗಾತ್ರದ ರತ್ನ ಪಕ್ಷಿಗಳು ಬೇರೆ ಬೇರೆ ಕಡೆಗೆ ಕಾಣಸಿಗುತ್ತವೆ. ಅವುಗಳನ್ನು ಆಂಗ್ಲ ಭಾಷೆಯಲ್ಲಿ **lesser coucal** ಎನ್ನುತ್ತಾರೆ. ಇವು ಬರೀ ಗಾತ್ರದಲ್ಲಿ ಚಿಕ್ಕದು ಮಾತ್ರವಲ್ಲ ಕೆಲವು ದೈಹಿಕ ಭಿನ್ನತೆಯನ್ನು ಹೊಂದಿರುತ್ತವೆ.

ನವಿಲನ್ನು ನೋಡಿ ಕೆಂಭೂತವೂ ಕುಣಿಯಿತು ಎಂಬ ಮಾತು ಇದೆ. ನವಿಲಿನಷ್ಟು ದೊಡ್ಡದಲ್ಲದ, ಸುಂದರವಲ್ಲದ ರತ್ನ ಪಕ್ಷಿ ಏನೇ ಮಾಡಿದರೂ ಅದು ನವಿಲಾಗುವುದಿಲ್ಲ ಎಂದು ಹೇಳಲು ಜನಪದರು ಹೀಗೆ ಹೇಳಿರಬಹುದು. ಬೇರೆ ಏನೋ ಆಗಲು ಬಯಸದೇ, ತಾನು ತಾನಾಗಿಯೇ ಇರುವುದರಲ್ಲಿಯೇ ಸುಖವಿದೆ ಎಂಬ ಅಂತರಾರ್ಥವೂ ಈ ಮಾತಿನಲ್ಲಿ ಇದ್ದಂತಿದೆ.

ರತ್ನ ಪಕ್ಷಿಗಳ ದಾಂಪತ್ಯವೂ ಕುತೂಹಲಕರ. ಒಮ್ಮೆ ಜೊತೆಯಾದ ಈ ಪಕ್ಷಿಗಳು ಜೀವನಪೂರ್ತಿ ಜೊತೆಯಾಗಿಯೇ ಇರುತ್ತವೆ. ಮೇಲ್ನೋಟಕ್ಕೆ ಯಾವುದು ಹೆಣ್ಣು, ಯಾವುದು ಗಂಡು ಎಂಬುದನ್ನು ಗುರುತಿಸಲು ಆಗುವುದಿಲ್ಲ. ಗಾತ್ರ–ರೂಪಗಳಲ್ಲಿ ಸಾಮಾನ್ಯವಾಗಿ ಯಾವ ವ್ಯತ್ಯಾಸವೂ ಇರುವದಿಲ್ಲ.

ರತ್ನಪಕ್ಷಿ ಎಲ್ಲ ಪ್ರದೇಶಗಳಲ್ಲೂ ಶುಭ ಶಕುನದ ಹಕ್ಕಿ ಏನಲ್ಲ. ಕೆಲವು ಕಡೆಗೆ ಇವುಗಳನ್ನು ಅಶುಭ ಎಂದು ಭಾವಿಸುತ್ತಾರೆ. ಶುಭ– ಅಶುಭ ಎಂಬುದು ಆಯಾ ಪ್ರದೇಶಗಳ ನಂಬಿಗೆ, ಕಲ್ಪನೆ, ಕತೆಗಳನ್ನು ಅವಲಂಬಿಸಿರುತ್ತದೆ ಎಂಬುದು ಸುಸ್ಪಷ್ಟ. ■